

# ಪುಸ್ತಕ ಪರಿಚಯ

**ಅವಧೂತ ಗುರು ಶ್ರೀ ಚಂದ್ರಶೇಖರ ಭಾರತೀ**
ಲೇಖಕರು : ಹುರಗಲವಾಡಿ ಲಕ್ಷ್ಮೀನರಸಿಂಹಶಾಸ್ತ್ರೀ
ಪ್ರಕಾಶಕರು :
ವಿದ್ಯಾಶಂಕರ ಪ್ರಕಾಶನ, ನಂ.೩೦,
ದೇವೀರಮ್ಮಣ್ಣಿ ಅಗ್ರಹಾರ, ಮೈಸೂರು – ೫೭೦೦೦೪
ಪುಟ: ೨೦೬ +xviii, ಬೆಲೆ: ಅರವತ್ತು ರೂಪಾಯಿ ಮಾತ್ರ.

ಪ್ರಸ್ತುತ ಗ್ರಂಥ ದ್ವಿತೀಯ ಬಾರಿ ಮುದ್ರಣ ಕಂಡಿದೆ ಎಂಬುದೇ ಲೇಖಕರ ಪರಿಶ್ರಮಕ್ಕೆ ಓದುಗರು ನೀಡುತ್ತಿರುವ ಪುರಸ್ಕಾರ. ಸಂತ ಮಹಾತ್ಮರ ಜೀವನ ಚರಿತ್ರೆಗಳನ್ನು ಬರೆಯುವುದರಲ್ಲಿಯೇ ತಮ್ಮನ್ನು ಸಾಕಷ್ಟು ತೊಡಗಿಸಿಕೊಂಡಿರುವ ಶ್ರೀಯುತ ಲ.ನ. ಶಾಸ್ತ್ರಿಗಳು ಕರ್ನಾಟಕದ ಆಸ್ತಿಕ ವಾಚಕವರ್ಗಕ್ಕೆ ಅಪರಿಚಿತರೇನಲ್ಲ. ಅವರ ಬರಹಗಳು ಕಾಲ್ಪನಿಕ ಕಾದಂಬರಿಗಳಂತಿರದೆ ಶಿಸ್ತುಬದ್ಧ ಸಂಶೋಧನೆಗಳ ಫಲವಾಗಿದ್ದು, ಓದುಗರ ಮನಸ್ಸನ್ನು ಹಿಡಿದಿಡುವಂತಹ ಶೈಲಿಯನ್ನು ಹೊಂದಿವೆ.

ಶ್ರೀ ಚಂದ್ರಶೇಖರ ಭಾರತೀ ಸ್ವಾಮಿಗಳಂತಹ 'ಸ್ಥಿತಪ್ರಜ್ಞ'ರ ಜೀವನವನ್ನು ಅರ್ಥೈಸಿ ಮೆಚ್ಚಿಕೊಳ್ಳುವುದು ಸಾಮಾನ್ಯರ ಪಾಲಿಗೆ ಸುಲಭದ ಮಾತೇನಲ್ಲ. ಮಂದಮತಿಗಳಿಗೆ ಅವರ ನಡೆನುಡಿಗಳು ಶಾಸ್ತ್ರ ಬಾಹಿರವೆಂದೆನಿಸಬಹುದು. ಆದರೆ ವಾಸ್ತವವಾಗಿ ಶಾಸ್ತ್ರಗಳೇ ಅಂತಹವರನ್ನು ಅನುಸರಿಸುತ್ತವೆ. ಲ.ನ.ಶಾಸ್ತ್ರಿಗಳು ಮಧ್ಯೆಮಧ್ಯೆ ಇಂತಹ ಶಾಸ್ತ್ರದ ಹಿನ್ನೆಲೆಯನ್ನು ಸರಳವಾಗಿ ವಿವರಿಸಿರುವುದು ಸಮಂಜಸವಾಗಿದೆ.

ಎಲ್ಲ ಮಹಾಪುರುಷರ ಜೀವನದಲ್ಲಿ ಕಾಣುವ ಅದ್ಭುತವಾದ ವಿಶಿಷ್ಟತೆ ಇದು : ಜಗತ್ತಿನ ಸಕಲ ಬಂಧನಗಳನ್ನು ಕಡಿದುಕೊಂಡು "ಸ್ವಾರಾಜ್ಯಸ್ಥಿತ"ರಾಗಿದ್ದರೂ, ಆ ಸ್ಥಿತಿಯಿಂದ ವ್ಯಾವಹಾರಿಕ ಜಗತ್ತಿಗೆ ಇಳಿದಾಗ ಸೂಕ್ಷ್ಮಾತಿಸೂಕ್ಷ್ಮವಾದ ಅವರ ಮನಸ್ಸು ಜಗತ್ತಿನ ಪ್ರತಿಯೊಂದು ಘಟನೆಯ ಒಳಹೊರಗನ್ನು ಕೂಲಂಕಷವಾಗಿ ಅರಿಯುವುದರಿಂದ ಅವರು ವ್ಯಾವಹಾರಿಕ ಕ್ಷೇತ್ರದಲ್ಲೂ ಅತ್ಯುತ್ತಮ ಹಾಗೂ ಸೂಕ್ತ ಸಲಹೆ-ಪರಿಹಾರಗಳನ್ನು ನೀಡಬಲ್ಲವರಾಗಿರುತ್ತಾರೆ. ಪೂಜ್ಯ ಯತಿವರ್ಯರು ವರದಕ್ಷಿಣೆಯಂತಹ ಸಮಾಜದ ಬಹುಕಾಲೀನ ರೋಗಕ್ಕೂ ಸರಿಯಾದ ಔಷಧವನ್ನು ಸೂಚಿಸಿದ್ದಾರೆ (ಪು.೧೧೩-೧೧೫). ಮತಾಂತರಿಸುವಿಕೆ ಹಾಗೂ ಮತೀಯ ಗಲಭೆಗಳು ಹೆಚ್ಚುತ್ತಿರುವ ಈ ಕಾಲದಲ್ಲಿ, ಪೂಜ್ಯರು ಜನರಿಗೆ ಸ್ವಮತದಲ್ಲಿ ನಿಷ್ಠೆ ಹಾಗೂ ಪರಮತ ಸಹಿಷ್ಣುತೆಯನ್ನು ಬೋಧಿಸುವುದರ ಮೂಲಕ ಅನ್ಯಧರ್ಮಗುರುಗಳಿಗೆ ಮೇಲ್ಪಂಕ್ತಿ ಹಾಕಿದ್ದಾರೆ (ಪು.೧೦೦-೧೦೧). ಸಮಯ ಬಂದಾಗ ಧಾರ್ಮಿಕರು ತಮ್ಮ ಸಾತ್ವಿಕ ಸ್ವಾರ್ಥೋದ್ದೇಶವನ್ನೂ ಬದಿಗೆ ತಳ್ಳಿ ಸಹಮಾನವರ ಸೇವೆಗೈಯ್ಯಬೇಕೆನ್ನುವ ಶ್ರೀಗಳ ಅಪೂರ್ವ ಉಪದೇಶವು (ಪು.೨೦೨-೨೦೪) ಅವರ ಆಧ್ಯಾತ್ಮಿಕ ಸಿದ್ಧಿಯ ಔನ್ನತ್ಯವನ್ನು ಸೂಚಿಸುತ್ತದೆ.

ಗ್ರಂಥಾಂತ್ಯದಲ್ಲಿ ಹೊಸದಾಗಿ ಸೇರಿಸಿದ ಎರಡು ಸ್ಮೃತಿ ಚಿತ್ರಣಗಳು ಮನಮುಟ್ಟುತ್ತವೆ (ಪು.೨೦೫-೨೦೬). ಸ್ವಾಮಿ ಜಗದಾತ್ಮಾನಂದಜೀಯವರ ಮುನ್ನುಡಿಯು ಗ್ರಂಥಕ್ಕೆ ಪ್ರಬುದ್ಧ ಆರಂಭವನ್ನು ನೀಡಿದೆ. ಆಧುನಿಕ ತಂತ್ರಜ್ಞಾನದ ಈ ಯುಗದಲ್ಲಿ ಮುದ್ರಣ ದೋಷದಂತಹ ಕ್ಷುಲ್ಲಕ ದೋಷವನ್ನು ಸಂಪೂರ್ಣವಾಗಿ ತೆಗೆದುಹಾಕಬಹುದಾಗಿತ್ತಾದರೂ, ಪ್ರಸ್ತುತ ಗ್ರಂಥದಲ್ಲಿ ಈ ದೋಷವು ಹೇರಳವಾಗಿದ್ದು ಕೆಲವೊಮ್ಮೆ ಓದುಗರ ಮನಸ್ಸಿಗೆ ಕಿರಿಕಿರಿಯನ್ನುಂಟುಮಾಡುತ್ತದೆ. ಪ್ರಕಾಶಕರು ಮತ್ತು ಲೇಖಕರು ತಮ್ಮ ಮುಂದಿನ ಆವೃತ್ತಿಯಲ್ಲಿ ಗ್ರಂಥವನ್ನು ಈ ದೋಷದಿಂದ ಮುಕ್ತಗೊಳಿಸಬೇಕೆಂದು ಕೇಳಿಕೊಳ್ಳುತ್ತೇನೆ. ಗ್ರಂಥದ ಹೊದಿಕೆಗಳು ಹಾಗೂ ಪುಟಗಳು ಉತ್ತಮ ದರ್ಜೆಯದಾಗಿದ್ದು, ಬೆಲೆ, ಹೆಚ್ಚುತ್ತಿರುವ ವರ್ತಮಾನ ಜೀವನವೆಚ್ಚವನ್ನು ಗಮನಿಸಿದರೆ, ಸಹ್ಯವೇ. ಶ್ರೀ ಚಂದ್ರಶೇಖರ ಭಾರತೀ ಸ್ವಾಮಿಗಳ ಬಗ್ಗೆ ಏನೂ ಅರಿಯದವರಿಗೆ ಈ ಗ್ರಂಥ ಒಂದು ಪರಿಚಯವನ್ನು ನೀಡಿ, ಯತಿವರ್ಯರನ್ನು ಕುರಿತ "ಸಂವಾದ ತರಂಗಿಣಿ"ಯನ್ನು ಓದಲು ಅವರಲ್ಲಿ ಆಸಕ್ತಿಯನ್ನು ಕೆರಳಿಸುತ್ತದೆ. ಪೂಜ್ಯರನ್ನು ಅದಾಗಲೇ ಓದಿ ಬಲ್ಲ ವಾಚಕರಿಗಂತೂ ಈ ಗ್ರಂಥ ಸಾಧುಸಂಗದ ಸುಯೋಗ ನೀಡುವುದರಲ್ಲೇನೂ ಸಂಶಯವಿಲ್ಲ.

—ಬ್ರ.ಅಭಯ ಚೈತನ್ಯ

**ಆಶ್ರಮದ ವಿಶೇಷ ಕಾರ್ಯಕ್ರಮಗಳು**

**ಆಗಸ್ಟ್ 2002**

| | | |
|---|---|---|
| 4 | ಭಾನುವಾರ | ಏಕಾದಶಿ |
| 7 | ಬುಧವಾರ | ಸ್ವಾಮಿ ರಾಮಕೃಷ್ಣಾನಂದ ಜಯಂತಿ |
| 18 | ಭಾನುವಾರ | ಏಕಾದಶಿ |
| 22 | ಗುರುವಾರ | ಸ್ವಾಮಿ ನಿರಂಜನಾನಂದ ಜಯಂತಿ |
| 31 | ಶನಿವಾರ | ಶ್ರೀಕೃಷ್ಣ ಜನ್ಮಾಷ್ಟಮಿ |

ಪ್ರತಿ ಗುರುವಾರ ಮತ್ತು ಭಾನುವಾರ ಕನ್ನಡದಲ್ಲಿಯೂ ಪ್ರತಿ ಶನಿವಾರ ಇಂಗ್ಲಿಷಿನಲ್ಲಿಯೂ ಸಂಜೆ 6 ರಿಂದ 7 ರವರೆಗೆ ಆಧ್ಯಾತ್ಮಿಕ ಪ್ರವಚನಗಳು ಇರುತ್ತವೆ.

ವಿವರಗಳಿಗಾಗಿ ಆಶ್ರಮವನ್ನು ಸಂಪರ್ಕಿಸಿ